## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೆ ಜಯದೇವಪ್ಪ, ನಿವೃತ್ತ ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ದಂಡನೆ ವಿಧಿಸುವ ಬಗ್ಗೆ- ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:219:ಗ್ರಾಪಂಕಾ:2011, ದಿನಾಂಕ:25-07-2011.
2. ಅಪರ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/ARE-4/ENQ-158/2011, ದಿನಾಂಕ:28-12-2017.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ARE-4/ENQ-158/2011, ದಿನಾಂಕ:02-01-2018.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: LOK/ARE-4/ENQ-158/2011, ದಿನಾಂಕ:04-01-2018.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/08/ಗ್ರಾಪಂಕಾ/2018, ದಿನಾಂಕ:18-01-2018.
6. ಶ್ರೀ ಕೆ ಜಯದೇವಪ್ಪ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:26-02-2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರನ್ವಯ ಮಾನ್ಯ ಉಪಲೋಕಾಯುಕ್ತರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:08:ಗ್ರಾಪಂಕಾ:2018, ದಿನಾಂಕ:25-07-2011 ರಲ್ಲಿ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-04, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"Sri K Jayadevappa, the DGO, while working as Gram Panchayath Secretary of Nerlige Gram Panchayath in Davanagere Taluk and District, Smt. Ramabai, the mother of the complainant namely Sri Shashikumar Naik s/o Umapathi Naik resident of Chinnasamudra in Davanagere Taluk and District was sanctioned with a house under :Ashraya Scheme in Nerlige village and he demanded bribe of Rs.7500/- to give cheque in respect of first installment cheque of Rs.7500/- and further demanded a bribe of Rs.1500/- for releasing second installment cheque of Rs.7500/- but gave cheque to her on intervention of a member of Nerlige village panchayath and further when the complainant approached his on 24-03-2009 asked to give Rs.2100/- and received the said bribe of Rs.2100/- on 26-03-2009 to show official favour to the complainant and her mother Ramanibai, failing to maintain absolute integrity and devotion to duty, which act is unbecoming of a Government Servant and thus committed misconduct as enumerated under Rule 3(1)(i) to (iii) of KCS (Conduct) Rules 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ **"denial of 25% of the pensionary benefit perpetually"** ಎಂಬ ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟಿಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

...........

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

> "ಆರೋಪಿತ ನೌಕರರು ತಮ್ಮ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ವ್ಯಕ್ತಪಡಿಸಿರುವ ಅಂಶಗಳು ಮತ್ತು ಅಭಿಪ್ರಾಯಗಳು ತಪ್ಪು ಮಾಹಿತಿಯಿಂದ ಕೂಡಿರುತ್ತವೆ. ಲೋಕಾಯುಕ್ತ ತನಿಖಾ ಅವಧಿಯಲ್ಲಿ ತನಿಖಾಧಿಕಾರಿಗೆ ಸಾಕ್ಷಿಗಳು ನೀಡಿದ್ದ ಹೇಳಿಕೆಯನ್ನು ತನಿಖಾಧಿಕಾರಿಗಳು ಮಾನ್ಯ ಮಾಡಿರುವುದಿಲ್ಲ. ತನಿಖಾ ವೇಳೆಯಲ್ಲಿ ಪ್ರಸ್ತಾಪಿಸಿದ ಅಂಶಗಳನ್ನು ತನಿಖಾಧಿಕಾರಿಗಳು ಪರಿಗಣನೆಗೆ ತೆಗೆದುಕೊಳ್ಳದೆ ತಪ್ಪು ನಿರ್ಧಾರಕ್ಕೆ ಬಂದಿರುತ್ತಾರೆ. ಆಪಾದಿತ ನೌಕರರು ನೀಡಿದ್ದ ಸತ್ಯಾಂಶ ಹೇಳಿಕೆಯನ್ನು ಅಂದರೆ ದೂರುದಾರರು ನೀಡಿದ್ದ ಮೊತ್ತ ತೆರಿಗೆಗೆ ಸಂಬಂಧಿಸಿದ ಹಣವಾಗಿದ್ದು, ಅದು ಲಂಚದ ಮೊತ್ತವಲ್ಲ ಎಂಬುವುದನ್ನು ವಿವರಿಸಿದರೂ ತನಿಖಾಧಿಕಾರಿಗಳು ಈ ಹೇಳಿಕೆಯನ್ನು ಪರಿಗಣಿಸಿರುವುದಿಲ್ಲ. ಆದುದರಿಂದ ಆಪಾದಿತ ನೌಕರನು ತನ್ನ ಹೇಳಿಕೆಯಲ್ಲಿ ಮೇಲಿನ ಅಂಶಗಳನ್ನು ವಿವರಿಸಿದ್ದು, ಈ ಕಾರಣಗಳಿಂದ ಅವರನ್ನು ಆರೋಪ ಮುಕ್ತನನ್ನಾಗಿ ಮಾಡುವಂತೆ ಕೇಳಿಕೊಂಡಿರುತ್ತಾರೆ".

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

In the cross examination DW1 has deposed that, he is B.com degree holder. He knows to read and write Kannada. There is no enmity between himself and complainant. He admits that, his hand wash taken at the time of the trap was turned into pink color. He further deposed that, by that time, the money was seized from the bag. He has given his statement as per Ex.P4. he admits that, the facts deposed in his chief examination are not stated in his statement and written statement. He has deposed that, he had to give rd installment to the mother of the complainant and he denies that, there is no provision to with held the payment. He doesn't know to which property number the grant was sanctioned. But for the same site the property tax was due.

The DGO has taken a contention that, the complainant was due to pay the property tax and a shop license fee, therefore, he demanded complainant to pay the property tax and shop license fee and not demanded any bribe amount. The DGO has

produced the Assessment register extract Ex.D1, tax collection receipts Ex.D2 and D3.But the DGO has not produced any demand notices issued to complainant and Smt.Ramanibai. Even if the property tax and shop license fee is due that has to be recovered as the land Revenue by issuing the demand notices. For that reason, DGO cannot with hold the payment to the beneficiary. Though PW1 in the further cross examination the complainant admitted that, as demanded by DGO he paid Rs.2100/- to him. The shadow witness has clearly deposed regarding the demand and receipt of bribe amount made by the DGO. The attitude of PW1 and PW5 clearly show that, the DGO has won over them. Therefore, the contention of the DGO that, he refused to received Rs.2100/- pushed the money back, then the complainant forcibly kept the money in the bag cannot be accepted. If the DGO had not touched the money his hand wash would not have turned into pink color. The DGO is B.Com graduate and was working as Secretary. Being a prudent man, he would have not allowed the complainant to keep the money into his bag.

The oral and documentary evidence on record show that, the DGO while was working as Gram Panchayath Secreatary, Nerlige Gram Panchayath, Davanagere Taluk and District, in respect of grant sanctioned to the mother of the complainant under "Ashraya Scheme" in Nerlige village, the DGO demanded bribe amount of Rs.750/- to give cheque in respect of 1st installment cheque Rs.7500/- and further demanded a bribe amount of Rs.1500/- for releasing 2nd installment cheque of Rs.7500/- but gave cheque to her on intervention of a member of Nerlige Village Panchayath and further when the complainant approached the DGO on 24-03-2009 asked to give Rs.2100/- and received the said bribe of Rs.2100/- on 26-03-2009 to show official favour to the complainant and his mother Smt.Ramanibai. DGO has failed to give any acceptable or satisfactory reasons for possession of the tainted amount.

Thus DGO has failed to maintain absolute integrity, devotion to duty and acted in a manner of unbecoming of a Government Servant. Hence, I answer this point in the AFFIRMANTIVE.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ.. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ **"denial of 25% of the pensionary benefit perpetually"** ಎಂಬ ದಂಡನೆ ವಿಧಿಸಲು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತವೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ **"denial of 25% of the pensionary benefit perpetually"** ಎಂಬ ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

<u>**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/08/ಗ್ರಾಪಂಕಾ/2018, ಬೆಂಗಳೂರು, ದಿನಾಂಕ:11-07-2018.**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ **"denial of 25% of the pensionary benefit perpetually"** ಎಂಬ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>**ಗೆ,**</u>

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-04, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
7. ಶ್ರೀ ಕೆ ಜಯದೇವಪ್ಪ, ಕಾರ್ಯದರ್ಶಿ, ನೆರ್ಲಿಗೆ ಗ್ರಾಮ ಪಂಚಾಯತಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.